# 4ನೇ ಹೆಚ್ಚುವರಿ ಮುಖ್ಯ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಬೆಂಗಳೂರು ನಗರ

## ಸಿ.ಸಿ. ನಂ.18018/2017

ಫಿರ್ಯಾದಿದಾರರು : ರಾಜ್ಯ ಸರ್ಕಾರದ ಪರವಾಗಿ ಅಮೃತಹಳ್ಳಿ ಆರಕ್ಷಕ ಠಾಣೆ

**- ವಿರುದ್ಧ -**

ಆರೋಪಿಗಳು ಃ 1) ಶ್ರೀ ವೆಂಕಟೇಶ್.ಜಿ. ಬಿನ್. ಗಂಗಪ್ಪ, 36 ವರ್ಷ

2) ಶ್ರೀಮತಿ ಲಕ್ಷ್ಮಮ್ಮ
ಕೋಂ. ಲೇಟ್ ಗಂಗಪ್ಪ, 54 ವರ್ಷ,
ಇಬ್ಬರೂ ವಾಸಃ ನಂ.2/3, ಆನಂದ ಲೇಔಟ್,
ಮಸ್ತೂರ್ ರಸ್ತೆ, ಪ್ರಶಾಂತ ನಗರ,
ಚಿಕ್ಕಬಳ್ಳಾಪುರ ತಾಃ ಹಾಗೂ ಜಿಲ್ಲೆ.

3) ಶ್ರೀ ಸುಬ್ರಮಣಿ ಅಲಿಯಾಸ್ ಸುಬ್ಬಣ್ಣ
ಬಿನ್. ಲೇಟ್ ರಾಮಯ್ಯ ಅಲಿಯಾಸ್ ರಾಮಣ್ಣ,
60 ವರ್ಷ, ವಾಸಃ ಶ್ರೀರಾಮಪುರ ಗ್ರಾಮ,
ಜಕ್ಕೂರು ಅಂಚೆ, ಬೆಂಗಳೂರು ನಗರ.

## ದೋಷಾರೋಪಣೆ

ಶ್ರೀ. **ಸೋಮನಾಥ, ಬಿ.ಎ.(ಲಾ), ಎಲ್.ಎಲ್.ಬಿ.,** 4ನೇ ಹೆಚ್ಚುವರಿ ಮುಖ್ಯ ನ್ಯಾಯಿಕ ದಂಡಾಧಿಕಾರಿ ಆದ ನಾನು ಆರೋಪಿಗಳಾದ ನಿಮ್ಮ ಮೇಲೆ ಈ ಕೆಳಕಂಡಂತೆ ದೋಷಾರೋಪಣೆಯನ್ನು ಹೋರಿಸಿದ್ದೇನೆ.

ಅಮೃತಹಳ್ಳಿ ಠಾಣಾ ಸರಹದ್ದಿನ ಶ್ರೀರಾಮಪುರದ ಸರ್ವೆ ನಂ.45/1 ರಲ್ಲಿನ 30 ಗುಂಟೆ ಜಮೀನನ್ನು ಆರೋಪಿಗಳಾದ ನೀವುಗಳು ಸಮಾನ ಉದ್ದೇಶದಿಂದ ಸಾಕ್ಷಿ-1 ರವರಿಂದ ಹಣ ಪಡೆದು ಅವರಿಗೆ ಮಾರಾಟ ಮಾಡದೇ ತನ್ನ ಕುಟುಂಬದವರೆಗೆ ಕ್ರಯಪತ್ರವನ್ನು ಮಾಡಿಕೊಳ್ಳುವ ಒಳಸಂಚನ್ನು ರೂಪಿಸಿದ್ದು, ಈ ನಿಮ್ಮ ಕೃತ್ಯವು ಭಾರತೀಯ ದಂಡ ಸಂಹಿತೆ ಕಲಂ.120-ಬಿ ಸಹವಾಚಕ 34 ರಡಿಯಲ್ಲಿ ಶಿಕ್ಷಾರ್ಹ ಅಪರಾಧವಾಗಿದ್ದು ಈ ನ್ಯಾಯಾಲಯದ ಸಂಜ್ಞಾನಕ್ಕೆ ಒಳಪಡುತ್ತದೆ.

ಎರಡನೆಯದಾಗಿ, ಆರೋಪಿಗಳಾದ ನೀವುಗಳು ಸಮಾನ ಉದ್ದೇಶದಿಂದ ಸ್ವತ್ತಿನ ಮಾಲೀಕನಾದ 3ನೇ ಆರೋಪಿಯಾದ ನೀವು ನಿಮ್ಮ ಸಹೋದರರಿಂದ ದಿನಾಂಕ 29-04-2013 ರಂದು ರಿಲೀಸ್ ಡೀಡ್ ಮಾಡಿಸಿಕೊಂಡು ನಂತರ ಜಮೀನನ್ನು 2ನೇ ಆರೋಪಿಯಾದ ನಿಮಗೆ ಸೇಲ್ ಅಗ್ರಿಮೆಂಟ್ ಮಾಡಿಸಿದ್ದು, ಇದೇ ಜಮೀನನ್ನು 1 ಮತ್ತು 3ನೇ ಆರೋಪಿಗಳಾದ ನೀವುಗಳು ಜಮೀನು ಮಾರಾಟ ಮಾಡುವುದಾಗಿ ಸಾಕ್ಷಿ-1 ರವರಿಗೆ ನಂಬಿಸಿ ಹಣ ಪಡೆದುಕೊಂಡು ವಂಚನೆ ಮಾಡುವ ಸಲುವಾಗಿ ದಿನಾಂಕ 10-01-2014 ರಂದು ಸಾಕ್ಷಿ-1 ರವರಿಗೆ ಸಾಕ್ಷಿ-2 ಮತ್ತು 3 ರ ಸಮ್ಮುಖದಲ್ಲಿ ಸಾಕ್ಷಿ-1 ರವರಿಂದ ಮುಂಗಡವಾಗಿ ಒಟ್ಟಾರೆ 85,51,646/- ರೂ. ಗಳ ಹಣವನ್ನು 1 ಮತ್ತು 3ನೇ ಆರೋಪಿಗಳಾದ ನೀವುಗಳು ಪಡೆದುಕೊಂಡು ಸೇಲ್ ಅಗ್ರಿಮೆಂಟ್ ಮಾಡಿಕೊಟ್ಟು 3 ತಿಂಗಳೊಳಗಾಗಿ ಶುದ್ಧಕ್ರಯಕ್ಕೆ ನೀಡಿರುವುದಾಗಿ ಸಾಕ್ಷಿ-1 ರವರನ್ನು ಅಪ್ರಮಾಣಿಕವಾಗಿ ನಂಬಿಸಿ ದ್ರೋಹವೆಸಗಿದ್ದು, ಕಾರಣ ಭಾರತೀಯ ದಂಡ ಸಂಹಿತೆ ಕಲಂ.406 ಸಹವಾಚಕ 34 ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ನನ್ನ ಸಂಜ್ಞಾನದಲ್ಲಿ ಎಸಗಿರುತ್ತೀರಿ.

ಮೂರನೆಯದಾಗಿ, ಅದೇ ದಿನ, ಅದೇ ಸಮಯ ಮತ್ತು ಅದೇ ಸ್ಥಳದಲ್ಲಿ ಆರೋಪಿಗಳಾದ ನೀವುಗಳು ಸಾಕ್ಷಿ-1 ರವರಿಗೆ ಮೋಸ ಮಾಡುವ ಸಮಾನ ಉದ್ದೇಶದಿಂದ ಸದರಿ ಜಮೀನನ್ನು ಸಾಕ್ಷಿ-1 ರವರಿಗೆ ಸೇಲ್ ಅಗ್ರಿಮೆಂಟ್ ಮಾಡಿಕೊಟ್ಟಿದ್ದರೂ ಸಹ 1ನೇ ಮತ್ತು 3ನೇ ಆರೋಪಿಯಾದ ನೀವು ಹಾಗೂ ನಿಮ್ಮ ಕುಟುಂಬದಿಂದ ನಿಮ್ಮ ಹೆಸರಿಗೆ ದಿನಾಂಕ 03-03-2014 ರಂದು ಶುದ್ಧಕ್ರಯಕ್ಕೆ ಪಡೆದುಕೊಂಡು ನಂತರ ಸದರಿ ಜಮೀನನ್ನು 2ನೇ ಆರೋಪಿಗೆ ದಿನಾಂಕ 03-11-2014 ರಂದು ಗಿಫ್ಟ್ ಡೀಡ್ ಮೂಲಕ ನೀಡಿ ಸಾಕ್ಷಿ-1 ರವರಿಗೆ ಅಪ್ರಮಾಣಿಕವಾಗಿ ವಂಚಿಸಿ ಮೋಸ ಮಾಡಿದ್ದು, ಕಾರಣ ಭಾರತೀಯ ದಂಡ ಸಂಹಿತೆ ಕಲಂ.420 ಸಹವಾಚಕ 34 ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ನನ್ನ ಸಂಜ್ಞಾನದಲ್ಲಿ ಎಸಗಿರುತ್ತೀರಿ.

ಈ ಮೇಲ್ಕಂಡ ಆಪಾದನೆಗಳ ಬಗ್ಗೆ ಆರೋಪಿಗಳಾದ ನೀವುಗಳು ಈ ನ್ಯಾಯಾಲಯದಲ್ಲಿ ವಿಚಾರಣೆಗೊಳಪಡತಕ್ಕದ್ದು ಎಂದು ನಿರ್ದೇಶಿಸುತ್ತೇನೆ.

ದಿನಾಂಕಃ 18.07.2025
ಬೆಂಗಳೂರು. 4ನೇ ಹೆ ಮು ನ್ಯಾ ದಂಡಾಧಿಕಾರಿ.

# 4ನೇ ಹೆಚ್ಚುವರಿ ಮುಖ್ಯ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಬೆಂಗಳೂರು ನಗರ

## ಸಿ.ಸಿ. ನಂ.18018/2017

ಫಿರ್ಯಾದಿದಾರರು : ರಾಜ್ಯ ಸರ್ಕಾರದ ಪರವಾಗಿ ಅಮೃತಹಳ್ಳಿ
ಆರಕ್ಷಕ ಠಾಣೆ

**- ವಿರುದ್ಧ -**

ಆರೋಪಿಗಳು ಃ 1) ಶ್ರೀ ವೆಂಕಟೇಶ್.ಜಿ. ಬಿನ್. ಗಂಗಪ್ಪ, 36 ವರ್ಷ

## ಆರೋಪಣೆ

ಪ್ರಶ್ನೆ 1) ನಿಮಗೆ ಓದಿ ವಿವರಿಸಿ ಹೇಳಿದ ಆರೋಪಣೆ ತಿಳಿಯಿತೆ ?

ಉತ್ತರಃ

ಪ್ರಶ್ನೆ 2) ನೀವು ಆರೋಪಣೆಯನ್ನು ಒಪ್ಪಿಕೊಳ್ಳುವಿರಾ ಇಲ್ಲವೇ ವಿಚಾರಣೆಯಾಗ ಬಯಸುವಿರಾ ?

ಉತ್ತರಃ

ದೋಷಾರೋಪಣೆಯನ್ನು ಅರೋಪಿಗೆ ತಿಳಿಯುವ ಭಾಷೆಯಲ್ಲಿ ಓದಿ ವಿವರಿಸಿ ಹೇಳಿದ ನಂತರ ಅವರು ನೀಡಿದ ಉತ್ತರಗಳನ್ನು ಸರಿಯಾಗಿ ಬರೆದುಕೊಂಡಿರುವೆನೆಂದು ದೃಢೀಕರಿಸುತ್ತೇನೆ.

ದಿನಾಂಕಃ 18.07.2025

ಬೆಂಗಳೂರು. 4ನೇ ಹೆ ಮು ನ್ಯಾ ದಂಡಾಧಿಕಾರಿ.

# 4ನೇ ಹೆಚ್ಚುವರಿ ಮುಖ್ಯ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಬೆಂಗಳೂರು ನಗರ

## ಸಿ.ಸಿ. ನಂ.18018/2017

ಫಿರ್ಯಾದಿದಾರರು : ರಾಜ್ಯ ಸರ್ಕಾರದ ಪರವಾಗಿ ಅಮೃತಹಳ್ಳಿ ಆರಕ್ಷಕ ಠಾಣೆ

**- ವಿರುದ್ಧ -**

ಆರೋಪಿಗಳು ಃ 2) ಶ್ರೀಮತಿ ಲಕ್ಷ್ಮಮ್ಮ
ಕೋಂ. ಲೇಟ್ ಗಂಗಪ್ಪ, 54 ವರ್ಷ,

## ಆರೋಪಣೆ

ಪ್ರಶ್ನೆ 1) ನಿಮಗೆ ಓದಿ ವಿವರಿಸಿ ಹೇಳಿದ ಆರೋಪಣೆ ತಿಳಿಯಿತೆ ?

ಉತ್ತರಃ

ಪ್ರಶ್ನೆ 2) ನೀವು ಆರೋಪಣೆಯನ್ನು ಒಪ್ಪಿಕೊಳ್ಳುವಿರಾ ಇಲ್ಲವೇ ವಿಚಾರಣೆಯಾಗ ಬಯಸುವಿರಾ ?

ಉತ್ತರಃ

ದೋಷಾರೋಪಣೆಯನ್ನು ಅರೋಪಿಗೆ ತಿಳಿಯುವ ಭಾಷೆಯಲ್ಲಿ ಓದಿ ವಿವರಿಸಿ ಹೇಳಿದ ನಂತರ ಅವರು ನೀಡಿದ ಉತ್ತರಗಳನ್ನು ಸರಿಯಾಗಿ ಬರೆದುಕೊಂಡಿರುವೆನೆಂದು ದೃಢೀಕರಿಸುತ್ತೇನೆ.

ದಿನಾಂಕಃ 18.07.2025

ಬೆಂಗಳೂರು. 4ನೇ ಹೆ ಮು ನ್ಯಾ ದಂಡಾಧಿಕಾರಿ.

# 4ನೇ ಹೆಚ್ಚುವರಿ ಮುಖ್ಯ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಬೆಂಗಳೂರು ನಗರ

## ಸಿ.ಸಿ. ನಂ.18018/2017

ಫಿರ್ಯಾದಿದಾರರು : ರಾಜ್ಯ ಸರ್ಕಾರದ ಪರವಾಗಿ ಅಮೃತಹಳ್ಳಿ ಆರಕ್ಷಕ ಠಾಣೆ

**- ವಿರುದ್ಧ -**

ಆರೋಪಿಗಳು ಃ 3) ಶ್ರೀ ಸುಬ್ರಮಣಿ ಅಲಿಯಾಸ್ ಸುಬ್ಬಣ್ಣ ಬಿನ್. ಲೇಟ್ ರಾಮಯ್ಯ ಅಲಿಯಾಸ್ ರಾಮಣ್ಣ,

## ಆರೋಪಣೆ

ಪ್ರಶ್ನೆ 1) ನಿಮಗೆ ಓದಿ ವಿವರಿಸಿ ಹೇಳಿದ ಆರೋಪಣೆ ತಿಳಿಯಿತೆ ?

ಉತ್ತರಃ

ಪ್ರಶ್ನೆ 2) ನೀವು ಆರೋಪಣೆಯನ್ನು ಒಪ್ಪಿಕೊಳ್ಳುವಿರಾ ಇಲ್ಲವೇ ವಿಚಾರಣೆಯಾಗ ಬಯಸುವಿರಾ ?

ಉತ್ತರಃ

ದೋಷಾರೋಪಣೆಯನ್ನು ಅರೋಪಿಗೆ ತಿಳಿಯುವ ಭಾಷೆಯಲ್ಲಿ ಓದಿ ವಿವರಿಸಿ ಹೇಳಿದ ನಂತರ ಅವರು ನೀಡಿದ ಉತ್ತರಗಳನ್ನು ಸರಿಯಾಗಿ ಬರೆದುಕೊಂಡಿರುವೆನೆಂದು ದೃಢೀಕರಿಸುತ್ತೇನೆ.

ದಿನಾಂಕಃ 18.07.2025

ಬೆಂಗಳೂರು. 4ನೇ ಹೆ ಮು ನ್ಯಾ ದಂಡಾಧಿಕಾರಿ.